ಕರ್ನಾಟಕ ಸರ್ಕಾರ

**ಸಂಖ್ಯೆ:** ಡಿಟಿಇ/513/ಎಸಿಎಂ(2)/2017-18(ಭಾ)

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:02-07-2018.

## -:: ಸುತ್ತೋಲೆ ::-

**ವಿಷಯ:** ರಾಜ್ಯದಲ್ಲಿನ ಪಾಲಿಟೆಕ್ನಿಕ್ ಶಿಕ್ಷಣದಲ್ಲಿ ಬೋಧನಾ ಶುಲ್ಕವನ್ನು ಪರಿಷ್ಕರಣೆ ಮಾಡಿರುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂ. ಇಡಿ 119 ಟಿಪಿಇ 2005, ದಿ:18-10-2005.
2. ಸರ್ಕಾರದ ಆದೇಶ ಸಂ. ಇಡಿ 10 ಟಿಪಿಇ 2012, ದಿ:29-05-2013.
3. ಸರ್ಕಾರದ ಆದೇಶ ಸಂ. ಇಡಿ 64 ಟಿಪಿಇ 2016, ದಿ:21-06-2016.
4. ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30-06-2018.

-0000000-

ರಾಜ್ಯದ ಪಾಲಿಟೆಕ್ನಿಕ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪಾವತಿಸಬೇಕಾದ ಬೋಧನಾ ಶುಲ್ಕವನ್ನು ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿನಂತೆ ವಾರ್ಷಿಕ ಶೇ.5 ರಷ್ಟು ಹೆಚ್ಚಳ ಮಾಡಿ ಉಲ್ಲೇಖ(4)ರ ಸರ್ಕಾರದ ಪತ್ರದಲ್ಲಿ 2018-19ನೇ ಶೈಕ್ಷಣಿಕ ಸಾಲಿಗೆ ಹಿಂದಿನ ಸಾಲಿನ ಬೋಧನಾ ಶುಲ್ಕದಲ್ಲಿ ಮಾತ್ರ ಶೇ.5ರಷ್ಟು ಹೆಚ್ಚಿಸಿ ಸರ್ಕಾರವು ಅನುಮತಿ ನೀಡಿದೆ. ಅದರಂತೆ, 2018-19ನೇ ಸಾಲಿನಿಂದ ಶೇ.5 ರಂತೆ ಬೋಧನಾ ಶುಲ್ಕದಲ್ಲಿ ಹೆಚ್ಚಳದೊಂದಿಗೆ ನಿಗಧಿಪಡಿಸಿರುವ ಪರಿಷ್ಕೃತ ಪಾಲಿಟೆಕ್ನಿಕ್ ಶಿಕ್ಷಣ ಶುಲ್ಕಗಳ ವಿವರ ಈ ಕೆಳಕಂಡಂತೆ ಇರುತ್ತದೆ.

**ಪರೀಷ್ಕೃತ ಶುಲ್ಕ ವಿವರ**

| ಕ್ರ. ಸಂ. | ಶುಲ್ಕದ ವಿವರ | ಸರ್ಕಾರಿ ಪಾಲಿಟೆಕ್ನಿಕ್ | | ಅನುದಾನಿತ ಪಾಲಿಟೆಕ್ನಿಕ್ | | ಅನುದಾನಿತ ಪಾಲಿಟೆಕ್ನಿಕ್‌ಗಳ ಅನುದಾನ ರಹಿತ ಕೋರ್ಸುಗಳು, ಅನುದಾನಿತ ಕೋರ್ಸುಗಳಲ್ಲಿ ಆಡಳಿತ ಮಂಡಳಿ ಕೋಟಾದ ಸ್ಥಾನಗಳು ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳು | | | |
|---|---|---|---|---|---|---|---|---|---|
| | | | | | | ಕರ್ನಾಟಕ ವಿದ್ಯಾರ್ಥಿಗಳಿಗೆ | | ಕರ್ನಾಟಕೇತರ ವಿದ್ಯಾರ್ಥಿಗಳಿಗೆ | |
| | | ಪ್ರಸ್ತುತ ಇರುವ ಶಿಕ್ಷಣ ಶುಲ್ಕಗಳು (₹ ಗಳಲ್ಲಿ) | 2018-19ನೇ ಸಾಲಿನಿಂದ ಜಾರಿಗೆ ಬರುವ ಪರೀಷ್ಕೃತ ಬೋಧನಾ ಶುಲ್ಕ (₹ ಗಳಲ್ಲಿ) | ಪ್ರಸ್ತುತ ಇರುವ ಶಿಕ್ಷಣ ಶುಲ್ಕಗಳು (₹ ಗಳಲ್ಲಿ) | 2018-19ನೇ ಸಾಲಿನಿಂದ ಜಾರಿಗೆ ಬರುವ ಬೋಧನಾ ಶುಲ್ಕ (₹ ಗಳಲ್ಲಿ) | ಪ್ರಸ್ತುತ ಇರುವ ಶಿಕ್ಷಣ ಶುಲ್ಕಗಳು (₹ ಗಳಲ್ಲಿ) | 2018-19ನೇ ಸಾಲಿನಿಂದ ಜಾರಿಗೆ ಬರುವ ಬೋಧನಾ ಶುಲ್ಕ (₹ ಗಳಲ್ಲಿ) | ಪ್ರಸ್ತುತ ಇರುವ ಶಿಕ್ಷಣ ಶುಲ್ಕಗಳು (₹ ಗಳಲ್ಲಿ) | 2018-19ನೇ ಸಾಲಿನಿಂದ ಜಾರಿಗೆ ಬರುವ ಬೋಧನಾ ಶುಲ್ಕ (₹ ಗಳಲ್ಲಿ) |
| 1. | ಬೋಧನಾ ಶುಲ್ಕ | 2,800 | 2,940 | 5,350 | 5,618 | 11,500 | 12,075 | 18,500 | 19,425 |
| 2. | ಇತರೆ ಶುಲ್ಕ | 830 | 830 | 830 | 830 | 830 | 830 | 830 | 830 |
| 3. | ಅಭಿವೃದ್ಧಿ ಶುಲ್ಕ | 500 | 500 | 500 | 500 | 500 | 500 | 500 | 500 |
| | **ಒಟ್ಟು ₹** | **4,130** | **4,270** | **6,680** | **6,948** | **12,830** | **13,405** | **19,830** | **20,755** |

ಸರ್ಕಾರದ ಆದೇಶದಲ್ಲಿನ ಸೂಚನೆಗಳ ಪ್ರಕಾರ ಪರಿಷ್ಕರಿಸಲಾದ ಬೋಧನಾ ಶುಲ್ಕವು 2018-19ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಪ್ರಥಮ ಸೆಮಿಸ್ಟರ್‌ಗಳಿಗೆ ಮಾತ್ರ ಅನ್ವಯವಾಗುತ್ತದೆ. ಈಗಾಗಲೇ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಬೋಧನಾ ಶುಲ್ಕದಲ್ಲಿ ಹೆಚ್ಚುವರಿಯಾಗಿ ಶೇ.5 ರಷ್ಟು ಬೋಧನಾ ಶುಲ್ಕವನ್ನು ಪ್ರವೇಶ ಹೊಂದಿದ ಸಂಸ್ಥೆಯಲ್ಲಿ ಪಾವತಿಸಿಕೊಳ್ಳಲು ಸೂಚಿಸಿದೆ.

ಪ್ರಸಕ್ತ ಸಾಲಿನಲ್ಲಿ 03 & 05ನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಮಾತ್ರ ಹಿಂದಿನ ಸಾಲಿನಲ್ಲಿದ್ದ ಬೋಧನಾ ಶುಲ್ಕವನ್ನು ಸಂಗ್ರಹಿಸತಕ್ಕದ್ದು. ಮೇಲ್ಕಂಡಂತೆ ಕೂಡಲೇ ಕ್ರಮಕೈಗೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆ ನೀಡಿ ಹಾಗೂ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಹಾಗೂ ಪೋಷಕರುಗಳ ಗಮನಕ್ಕೆ ತರುವುದು. ಹಾಗೂ ಸದರಿ ಪರೀಷ್ಕೃತ ಶುಲ್ಕವನ್ನು ಜಾರಿಗೊಳಿಸಲು ಕ್ರಮವಹಿಸುವುದು.

ನಿರ್ದೇಶಕರು

08/07/18

*ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳ ಗಮನಕ್ಕೆ ಹಾಗೂ ಸೂಕ್ತ ಕ್ರಮಕ್ಕಾಗಿ*

**ಪ್ರತಿ:-**

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಜಂಟಿ ನಿರ್ದೇಶಕರು(ತನಿಖೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆಗೆ.
5. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ.
6. ಡಿವಿಪಿ(1), ಡಿವಿಪಿ(2), ಇಎಸ್‌ಟಿ(9), ಎಂಎಸ್‌ಸಿ, ಸಿಡಿಸಿ, ಎಸ್‌ಸಿಹೆಚ್(1), ಎಸ್‌ಸಿಹೆಚ್(2), ಐಎನ್‌ಎಸ್ ವಿಭಾಗಗಳಿಗೆ, ಬಿಯುಡಿ ಮತ್ತು ಇಆರ್‌ಪಿ ವಿಭಾಗಕ್ಕೆ.
7. ಹೆಚ್ಚಿನ ಪ್ರತಿ.